ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue-6, May- June 2025, Pp. 16-21**
**©*IIMRD*, Mysuru**

IIMRD JOURNALS

**www.iimrd.com**

# ಮೈಸೂರು ಜಿಲ್ಲೆಯ ಶಾಸನೋಕ್ತ ದೇವಾಲಯಗಳ ಅಧ್ಯಯನ

**ಸುಧಾಕರ**

ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ

**ಸಾರಾಂಶ: (Abstract)**

*ಮೈಸೂರು ಜಿಲ್ಲೆಯು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರುವಾಸಿಯಾಗಿದೆ. ಸಾ.ಶ.1973ರಲ್ಲಿ ಕರ್ನಾಟಕ ರಾಜ್ಯವೆಂದು ಪುನರ್‌ನಾಮಕರಣ ಮಾಡುವವರೆಗೆ ಕರ್ನಾಟಕ ರಾಜ್ಯಕ್ಕೆ ಮೈಸೂರಿನ ಹೆಸರೇ ಇದ್ದದ್ದು ಅದರ ಮಹತ್ವವನ್ನು ತಿಳಿಸುತ್ತದೆ. ಮೈಸೂರು ಜಿಲ್ಲೆಯು 9 ತಾಲೂಕುಗಳನ್ನು ಹೊಂದಿದೆ. ಅವುಗಳೆಂದರೆ ಹೆಗ್ಗಡದೇವನಕೋಟೆ, ನಂಜನಗೂಡು, ಪಿರಿಯಾಪಟ್ಟಣ, ಮೈಸೂರು, ಹುಣಸೂರು, ತಿರುಮಕೂಡಲು ನರಸೀಪುರ ಹಾಗೂ ಕೃಷ್ಣರಾಜನಗರ, ಸಾಲಿಗ್ರಾಮ, ಸರಗೂರುಗಳಾಗಿವೆ. ಮೈಸೂರು ಜಿಲ್ಲೆಯನ್ನು ಆಳ್ವಿಕೆ ಮಾಡಿದ ಕದಂಬರು, ಗಂಗರು, ಪುನ್ನಾಟ ರಾಜ್ಯದ ಅರಸರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಸ್ಥಳೀಯ ಪ್ರಭುಗಳಾದ ಚಂಗಾಳ್ವರು, ಹದಿನಾಡಿನ ಅರಸರು ಹಾಗೂ ಆಡಳಿತ ಅಧಿಕಾರಿಗಳು ಶೈವ ದೇವಾಲಯಗಳಿಗೆ ಪ್ರೋತ್ಸಾಹವನ್ನು ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ.*

**ಮುಖ್ಯಪದಗಳು (Keywords):** ಮೈಸೂರು, ಶಾಸನ, ಬೆಟ್ಟದಪುರ, ಸೋಮನಾಥಪುರ, ಚಾಮುಂಡಿಬೆಟ್ಟ

**ಪೀಠಿಕೆ**

ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿದ್ದು, ಇಲ್ಲಿ ಎರಡು ಶಬ್ದಗಳಿವೆ. ದೇವ ಮತ್ತು ಆಲಯ ಅಂದರೆ ದೇವರಮನೆ, ದೇವರ ಆಲಯ, ದೇವರ ಕಟ್ಟಡ ಅಂದರೆ ದೇವರು ಇರತಕ್ಕಂತಹ ಸ್ಥಾನ ಎಂದರ್ಥ.[1] ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಲ್ಲದೆ. ಇವು ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲಕರವಾಗಿರುವ ಒಂದು ತಾಣವಾಗಿವೆ. ಒಟ್ಟಾರೆ ಇವು ಸಮಾಜದ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಯ ಪ್ರತೀಕ. ಹಾಗೆಯೇ ನಮ್ಮ ಭವ್ಯ ಸಾಂಸ್ಕೃತಿಕ ನೆಲೆಗಳಾಗಿವೆ.[2] ಒಟ್ಟಾರೆ ಮಾನವನು ತನ್ನ ಪ್ರಾಪಂಚಿಕ ಸುಖವನ್ನು ಪಡೆಯಲು, ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವರ ಬಳಿ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಆತನನ್ನು ಧ್ಯಾನಿಸಲು, ಮನಸ್ಸಿಗೆ ಶಾಂತತೆ ಪಡೆಯಲು ದೇವಾಲಯಗಳು ಅವಶ್ಯಕವಾಗಿವೆ.[3] ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಶೈವದೇವಾಲಯಗಳನ್ನು ಕುರಿತು ಚರ್ಚಿಸಲಾಗಿದೆ.

*Please cite this article as:* ಸುಧಾಕರ. (2025). ಮೈಸೂರು ಜಿಲ್ಲೆಯ ಶಾಸನೋಕ್ತ ದೇವಾಲಯಗಳ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 16–21

**ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ದೇವಾಲಯ**

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮವು ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಬೆಟ್ಟದಪುರವನ್ನು ದ್ವಾರಕೆಯಿಂದ ಬಂದ ವಿಕ್ರಮರಾಯನ ಮಗ ಚಂಗಲರಾಯನ ನಿರ್ಮಿಸಿದನೆಂದು ಪ್ರತೀತಿ ಇದೆ. ಈ ಪ್ರದೇಶವನ್ನು ಕದಂಬರು, ಗಂಗರು, ಚೋಳರು, ಚೆಂಗಾಳ್ವರು ಮತ್ತು ಕೊಂಗಾಳ್ವರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಸೇರಿದಂತೆ ರಾಜ್ಯವನ್ನಾಳಿದ ಪ್ರತಿಷ್ಠಿತ ಅರಸು ಮನೆತನಗಳು ಆಳ್ವಿಕೆ ಮಾಡಿರುರುವುದು ತಿಳಿದುಬರುತ್ತದೆ.[4] ಸಿಡಿಲು ಮಲ್ಲಿಕಾರ್ಜುನ ದೇವಾಲಯವು ಗ್ರಾಮದ ಹೊರಭಾಗದಲ್ಲಿ ಸುಮಾರು 1 ಕಿ.ಮೀ.ದೂರದಲ್ಲಿ ಪೂರ್ವ ದಿಕ್ಕಿಗೆ ಬೆಟ್ಟದ ಮೇಲೆ ಕಂಡುಬರುತ್ತದೆ. ಇದು ವೀರಭದ್ರೇಶ್ವರ ದೇವಾಲಯದಿಂದ ಅನತಿ ದೂರದಲ್ಲೇ ಸಿಡಿಲು ಮಲ್ಲಿಕಾರ್ಜುನ ದೇವಾಲಯವು ಎತ್ತರವಾದ ಬೆಟ್ಟದ ಮೇಲೆ ಕಂಡುಬರುತ್ತದೆ. ಇದನ್ನು ಮೊದಲು ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ದೇವಾಲಯವೆಂದು ಕರೆಯುತ್ತಿರುವುದು ತಿಳಿದುಬರುತ್ತದೆ. ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ಸಿಡಿಲು ಮಲ್ಲಿಕಾರ್ಜುನಸ್ವಾಮಿಯಾದುದಕ್ಕೆ ಒಂದು ಇತಿಹಾಸವೇ ಇದೆ. ದೇವಾಲಯದಲ್ಲಿ ಪೂಜಾಕಾರ್ಯ ನಡೆಯುತ್ತಿರುವಾಗ ಭಕ್ತರೆಲ್ಲರೂ ಹೊರಾಂಗಣದಲ್ಲಿ ನೆರೆದಿದ್ದರು. ಅರ್ಚಕರು ಭಕ್ತಿಯಿಂದ ದೇವರ ಪೂಜೆ ನಡೆಸುತ್ತಿರುವಾಗ ಇದ್ದಕ್ಕಿದ್ದಂತೆ ಸಿಡಿಲು ವಾತಾಯಾನದ ಮೂಲಕ ಒಳ ಪ್ರವೇಶಿಸಿ ನೇರವಾಗಿ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಪ್ರದಕ್ಷಿಣೆ ಹಾಕಿ ಅಲ್ಲಿ ಯಾವ ಭಕ್ತರಿಗೂ ಸ್ವಲ್ಪವೂ ತಾಕದಂತೆ ಅದೇ ವಾತಾಯನದ ಮೂಲಕ ಹೊರಟು ಹೋಗುತ್ತದೆ. ಅಲ್ಲಿದ್ದ ಭಕ್ತರೆಲ್ಲರಿಗೂ ಆಶ್ಚರ್ಯವಾಗುತ್ತದೆ. ಆದ್ದರಿಂದ ಅನ್ನದಾನಿ ಮಲ್ಲಕಾರ್ಜುನಸ್ವಾಮಿಯನ್ನು ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಎಂದು ಕರೆಯಲಾಯಿತು.

ಸಂಗರಶೆಟ್ಟಹಳ್ಳಿಯ ಪಿರಿಯಾಪಟ್ಟಣ 37ರ ಶಾಸನದಲ್ಲಿ ಕುಲೋತುಂಗ ಚೋಳ ಚಂಗಾಳ್ವ ಒಡೆಯಾತ್ಯ ದೇವರು ರಾಜ್ಯವಾಳುತ್ತಿರುವಾಗ ಚಂಗಾಳ್ವಶೆಟ್ಟಿಹಳ್ಳಿಯ ಭೂಮಿಯನ್ನು ಧರ್ಮಕ್ಕೆ ದಾನಕೊಟ್ಟು ಗಣಪತಿ ದೇವರನ್ನು ಪ್ರತಿಷ್ಠಾಪನೆ ಮಾಡಿಸಿ ಗದ್ದೆಯನ್ನು ದಾನ ಬಿಟ್ಟ ಮಾಹಿತಿಯನ್ನು ಉಲ್ಲೇಖಿಸುತ್ತದೆ.[5] ಪಿರಿಯಾಪಟ್ಟಣ 22ರ ಸಾ.ಶ. 1521ನೆಯ ಅಲ್ಪನಾಯಕನಹಳ್ಳಿಯ ಶಾಸನವು ಶ್ರೀವೀರನಂಜರಾಜ ದೇವರು ಮತ್ತು ಶ್ರೀ ಮನುಮಹಾದೇವದೇವೋತ್ತಮರು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ದೇವರ ಅಂಗರಂಗಭೋಗಕ್ಕೆ ಅಲಪನಾಯಕಹಳ್ಳಿ ಗ್ರಾಮವನ್ನು ಉಂಬಳಿಯಾಗಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ.[6] ಅಯಿತನಹಳ್ಳಿಯ ಪಿರಿಯಾಪಟ್ಟಣ 103ರ ಸಾ.ಶ1565ನೆಯ ಶಾಸನವು ವೀರರಾಜವೊಡೆಯರು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ದೇವರ ಅಂಗರಂಗಭೋಗ ನಯಿವೇದ್ಯಕ್ಕೆ ನಡೆಸುವ ಸಲುವಾಗಿ ಅಯಿತನಹಳ್ಳಿ ಗ್ರಾಮವನ್ನು ದಾನವಾಗಿ ನೀಡಿರುವುದನ್ನು ಉಲ್ಲೇಖಿಸುತ್ತದೆ.[7] ಸಾ.ಶ.1586ನೆಯ ಬೆಟ್ಟದ ತುಂಗದ ಪಿರಿಯಾಪಟ್ಟಣ 110ರ ಶಾಸನವು ಶ್ರೀಕಂಠರಾಜದೇವ ಮತ್ತು ಪಿರಿಯಾರಾಜದೇವ ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗಭೋಗ ನಯಿವೇದ್ಯಕೆ ಭಕ್ತಿಪೂರ್ವಕವಾಗಿ ವೀರನಂಜರಾಯಪಟ್ಟಣದ ಸೀಮೆಯೊಳಾಗೊಂದು ಬೆಟ್ಟದ ತುಂಗದ ಸ್ಥಳವನ್ನು ಹಾಗೂ ಅದರ ಹತ್ತಿರದ ಗ್ರಾಮಗಳಾದ ಅನಿವಾಳು,

ಲಕ್ಕೂರು, ಕಲ್ಲಹಳ್ಳಿ, ಹಂಡಗನಹಳ್ಳಿ, ಸುರಗಹಳ್ಳಿ, ಬೆಳಗುಲಿ, ಮರುದೂರು, ಕೊತ್ತವಳ್ಳಿಯನ್ನು ಉಂಬಳಿಯಾಗಿ ನೀಡಿದರು.[8]

ಪಿರಿಯಾಪಟ್ಟಣ 71ರ ಸಾ.ಶ.1586ನೆಯ ಬೆಟ್ಟದಪುರ ಶಾಸನವು ಪಿರಿಯರಾಜದೇವ ತನ್ನ ತಂದೆ ಶ್ರೀಕಂಠವೊಡೆಯ ಮತ್ತು ತಾಯಿ ವಲ್ಲಭಂಮ ಹಾಗೂ ಸೋತ ಪಿರಿಯೊಡೆಯಗೆ ಪುಣ್ಯವಾಗಬೇಕೆಂದು ಶ್ರೀಗಿರಿ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗಭೋಗ ನಯಿವೇದ್ಯಕ್ಕೆ ವೀರ ನಂಜರಾಯಪಟ್ಟಣದ ಸೀಮೆಯೊಳಗಿನ ತುಂಗದ ಸ್ಥಳ ಮತ್ತು ಅದಕ್ಕೆ ಸಲುವ ಕೆಲವು ಗ್ರಾಮಗಳನ್ನು ದಾನ ನೀಡಿರುವುದನ್ನು ತಿಳಿಸಿದೆ.[9] ವಿಶೇಷವಾಗಿ ಸೋತ ಪಿರಿಯೊಡೆಯಗೆ ಪುಣ್ಯವಾಗಲೆಂದು ದಾನ ನೀಡಿರುವುದು ಬಹಳ ವಿಶಿಷ್ಟವಾದುದಾಗಿದೆ. ಪಿರಿಯಾಪಟ್ಟಣದ ಸಾ.ಶ.1590ನೆಯ 01ರ ಶಾಸನವು ಪಿರಿಯರಾಜದೇವ ಮಹಾ ಅರಸು ಸಿಂಗಪಟ್ಟಣವನ್ನು ಜೀರ್ಣೋದ್ಧಾರ ಮಾಡಿಸಿ ಸಿಂಗಪಟ್ಟಣವನ್ನು ಪಿರಿಯಾಪಟ್ಟಣ ಎಂಬ ಹೆಸರು ಪಡೆದಿದೆ.[10]

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಎರಡು ಗರ್ಭಗುಡಿಯನ್ನು ಹೊಂದಿದೆ. ಒಂದು ಗರ್ಭಗುಡಿಯಲ್ಲಿ ಗಿರಿಜಮ್ಮ ದೇವಿ ಮತ್ತೊಂದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಶಿವಲಿಂಗವಿರುವ ಗರ್ಭಗುಡಿಯ ಮುಂಭಾಗದಲ್ಲಿ ಸುಖನಾಸಿ, ನಾಲ್ಕು ಕಂಬಗಳುಳ್ಳ ನವರಂಗವಿದೆ. ನವರಂಗದ ಮೇಲ್ಭಾಗದಲ್ಲಿ ಭುವನೇಶ್ವರಿಯ ಚಿತ್ರವಿದೆ. ಈ ಕಂಬಗಳು ವೃತ್ತಾಕಾರದಲ್ಲಿದ್ದು ಸು.6ಅಡಿ ಎತ್ತರವುಳ್ಳವುಗಳಾಗಿವೆ. ನವರಂಗದ ಕಂಬಗಳ ಮೇಲೆ ಕಾಳಿಂಗಮರ್ದನ, ನಂದಿಸಹಿತ ಉಮಾಮಹೇಶ್ವರ ವೀರಾಂಜನೇಯ ನೃತ್ಯಮಾಡುತ್ತಿರುವ ಸ್ತ್ರೀಯ ಚಿತ್ರಗಳಿವೆ. ಗರ್ಭಗುಡಿಯ ಮುಂಭಾಗದ ಬಲಭಾಗದಲ್ಲಿ ವೀರಭದ್ರೇಶ್ವರನ ಚಿತ್ರಗಳಿವೆ. ಗರ್ಭಗುಡಿಯ ಮುಂಭಾಗದ ಬಲಭಾಗದಲ್ಲಿ ವೀರಭದ್ರೇಶ್ವರನ ವಿಗ್ರಹ ಮೂರ್ತಿಯನ್ನಿಡಲಾಗಿದೆ.

**ಸೋಮನಾಥಪುರದ ಪಂಚಲಿಂಗೇಶ್ವರ ದೇವಾಲಯ**

3ನೇ ನರಸಿಂಹನ ದಂಡನಾಯಕನಾದ ಸೋಮೆಯ ದಣ್ಣಾಯಕ,[11] ಸೋಮದೇವ,[12] ಸೋಮನಾಥನು[13] ಆತನ ಹೆಸರಿನಲ್ಲಿ ನಿರ್ಮಾಣ ಮಾಡಿದ ಅಗ್ರಹಾರವಾದ ಸೋಮನಾಥಪುರದ ಈಶಾನ್ಯ ದಿಕ್ಕಿನಲ್ಲಿ ಕಾವೇರಿ ನದಿಯ ದಡದಲ್ಲಿ ಬಿಜ್ಜಳೇಶ್ವರ, ಹೆಮ್ಮೇಶ್ವರ, ರೇವಣೇಶ್ವರ, ಸೋಮೇಶ್ವರ ಹಾಗೂ ಭೈರವೇಶ್ವರ ಎಂಬ ಹೆಸರಿನ ಪಂಚಕೂಟ ದೇವಾಲಯವನ್ನು ಪೂರ್ವಾಭಿಮುಖವಾಗಿ ಬಿಳಿಕಣಶಿಲೆಯನ್ನು ಬಳಸಿ ನಿರ್ಮಿಸಿದನು. ಈ ದೇವಾಲಯದಲ್ಲಿರುವ ರೇವಣೇಶ್ವರ ಹಾಗೂ ಹೆಮ್ಮೇಶ್ವರ ಲಿಂಗಗಳನ್ನು ತನ್ನ ತಂದೆ ತಾಯಿಯರ ಹೆಸರಿನಲ್ಲಿ ನಿರ್ಮಿಸಿರುವುದು ಉಲ್ಲೇಖಾರ್ಹವಾಗಿದೆ. ಇದರಿಂದ ಸೋಮನಾಥನ ತಂದೆ ತಾಯಿಯ ಹೆಸರುಗಳು ರೇವಣ್ಣ ಹಾಗೂ ಹೆಮ್ಮಲಾದೇವಿ ಎಂಬುದು ಪಂಚಲಿಂಗೇಶ್ವರ ದೇವಾಲಯದ ಬಳಿ ದೊರೆತಿರುವ ಸಾ.ಶ.1268ರ ಶಾಸನದಿಂದ ತಿಳಿದುಬರುತ್ತದೆ.[14] ಈ ದೇವಾಲಯವು ಒಂದೇ ಸಾಲಿನಲ್ಲಿ ಐದು ಗರ್ಭಗೃಹಗಳನ್ನು ಹೊಂದಿದ್ದು, ಪ್ರಸ್ತುತ ಎಡ ಮತ್ತು ಬಲಪಾರ್ಶ್ವದ ಕೊನೆಯಲ್ಲಿರುವ ಬಿಜ್ಜಳೇಶ್ವರ ಹಾಗೂ ಭೈರವೇಶ್ವರ ಭಾಗಗಳು ಸಂಪೂರ್ಣವಾಗಿ ಅವನತಿ ಹೊಂದಿದ್ದು, ಅವುಗಳ ಕುರುಹುಗಳು ಮಾತ್ರ ದೊರೆಯುತ್ತವೆ. ಮಧ್ಯ ಭಾಗದಲ್ಲಿದ್ದ ರೇವಣ್ಣೇಶ್ವರ, ಹೆಮ್ಮೇಶ್ವರ ಹಾಗೂ ಸೋಮೇಶ್ವರ ಗರ್ಭಗುಡಿಗಳ

ಶಿಥಿಲಗೊಂಡಿರುವ ಭಾಗಗಳು ಮಾತ್ರ ಉಳಿದಿವೆ. ಈ ಗರ್ಭಗುಡಿಗಳ ಮೇಲ್ಭಾಗ ಶಿಖರಗಳು ಒಂದೇ ರೀತಿ ಇದ್ದು ಇವು ದ್ರಾವಿಡ ಮಾದರಿಯಲ್ಲಿ ನಿರ್ಮಿತವಾಗಿವೆ.

ಈ ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ ಕಂಡುಬರುತ್ತವೆ. ಗರ್ಭಗುಡಿಗಳ ಮುಂಭಾಗದಲ್ಲಿರುವ ಕಂಬಗಳ ಮಂಟಪದಲ್ಲಿ 13 ಕಂಬ 2 ಸಾಲಿನಲ್ಲಿ ಒಟ್ಟು 26 ಕಂಬಗಳಿವೆ. ಈ ಕಂಬಗಳು ಒಂದು ಅಡಿಯ ಉಪಪೀಠ, ಚತುರಸ್ರಾಕಾರದ ಪೀಠ, ಅಷ್ಟಮುಖ ಹಾಗೂ ಹದಿನಾರು ಮುಖಗಳನ್ನು ಹೊಂದಿದ್ದು, ಮಧ್ಯಭಾಗದಲ್ಲಿ ಸಿಲಿಂಡರಿನಾಕಾರದಲ್ಲಿವೆ. ಈ ಕಂಬಗಳ ಮಂಟಪದ ಮುಂಭಾಗದಲ್ಲಿ ದೇವಾಲಯವನ್ನು ಪ್ರವೇಶಿಸಲು ಮುಖಮಂಟಪಗಳ ಮಾದರಿಯಲ್ಲಿ ನಿರ್ಮಿಸಿರುವ ಕಂಬಗಳ ಎರಡು ಮಂಟಪಗಳಿದ್ದು, ಅವು ಸಂಪೂರ್ಣ ಶಿಥಿಲಾವಸ್ಥೆಯಲ್ಲಿವೆ. ಈ ಮಂಟಪಗಳ ಎರಡು ಬದಿಗಳಲ್ಲಿ ಮೂರು ಮೂರು ಕಂಬಗಳಿದ್ದು, ಒಟ್ಟು ಆರು ಕಂಬಗಳು ಕಂಡುಬರುತ್ತವೆ.[15] ಅಧಿಷ್ಠಾನವು ನಾಲ್ಕು ಅಡಿ ಎತ್ತರವಾಗಿದ್ದು, ಉಪಾನ, ಜಗತಿ, ಕುಮುದ, ಗಳ, ಕಂಠ ಹಾಗೂ ಪ್ರತಿಯ ಭಾಗಗಳಿವೆ. ಮಧ್ಯಭಾಗದ ದೇವಾಲಯದ ಅಧಿಷ್ಠಾನವು ಸಂಪೂರ್ಣವಾಗಿ ಭೂಮಿಯಲ್ಲಿ ಮುಚ್ಚಿಹೋಗಿದ್ದು ಉಳಿದೆರಡು ಗರ್ಭಗುಡಿಗಳ ಅಧಿಷ್ಠಾನವು ಸುಸ್ಥಿಯಲ್ಲಿವೆ.[16]

**ಮಟಕೆರೆಯ ರಾಮಲಿಂಗೇಶ್ವರ ದೇವಾಲಯ**

ಮಟಕೆರೆ ಗ್ರಾಮವು ಕಬಿನಿ ಮತ್ತು ತಾರಕ ನದಿಗಳ ಸಂಗಮ ಸ್ಥಳದಲ್ಲಿದೆ. ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ 10 ಕಿ.ಮೀ ದೂರದಲ್ಲಿದ್ದು, ಇಲ್ಲಿ ಶ್ರೀ ರಾಮಲಿಂಗೇಶ್ವರ ದೇವಾಲಯವಿದೆ. ಹೆಗ್ಗಡದೇವನಕೋಟೆ 45ರ ಸಾ.ಶ.12–13ನೇ ಶತಮಾನದ ಮಠಕೆರೆಯ ಶಾಸನದಲ್ಲಿ ಬೊಮ್ಮನಾಯಕನು ರಾಮೇಶ್ವರ ದೇವರಿಗೆ 600 ಗುಳಿ ಬೆದ್ದಲು, 1000 ಗುಳಿ ಗದ್ದೆ ಭೂಮಿಯನ್ನು ದಾನ ಬಿಟ್ಟಿರುವ ವಿಷಯವು ತಿಳಿದುಬರುತ್ತದೆ.[17] ಸಾ.ಶ.1501ನೇ ಹೆಗ್ಗಡದೇವನಕೋಟೆ 33ರ ಶಾಸನವು ಉಲ್ಲಪಯ್ಯ ಕರ್ತರಿಗೆ ಪುಣ್ಯವಾಗಲಿ ಎಂದು ರಾಮಯಲಿಂಗ ದೇವರಿಗೆ ಕೋಳಿಗಾಲ ಗ್ರಾಮವನ್ನು ಅಂಗರಂಗ ವಯಿಭೋಗಕ್ಕೆ ಸರ್ವಮಾನ್ಯವಾಗಿ ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.[18] ಹೆಗ್ಗಡದೇವನಕೋಟೆ 134ನೇ ಸಾ.ಶ.1522ರ ಸೋಗಹಳ್ಳಿಯ ಶಾಸನದಲ್ಲಿ ವಿಜಯನಗರದ ಅರಸನಾದ ಕೃಷ್ಣದೇವರಾಯನಿಗೆ ಧರ್ಮವಾಗಲೆಂದು ಕೃಷ್ಣದೇವರಾಯನ ಪ್ರಧಾನರಾದ ಬಪ್ಪಯ್ಯನವರು ತಮ್ಮ ನಾಯಕತನಕ್ಕೆ ಒಳಪಟ್ಟಿದ್ದ ಕೋಟೆ ಸೀಮೆಯ ಬಯಲುನಾಡು ಸ್ಥಳದ 13 ಆದಾಯ ಸುಂಕ ನೀಡುವ ಸೋಗಳ್ಳಿ ಗ್ರಾಮವನ್ನು ಮಟಕೆರೆಯ ಶ್ರೀ ರಾಮಲಿಂಗೇಶ್ವರ ದೇವರ ಅಂಗರಂಗ ಭೋಗಕ್ಕೆ ದಾನವಾಗಿ ನೀಡಿರುವುದು ಕಂಡುಬರುತ್ತದೆ.[19] ಹೆಗ್ಗಡದೇವನಕೋಟೆ 43ರ ಸಾ.ಶ.1581ನೆಯ ಶಾಸನದಲ್ಲಿ ಜಯಣ್ಣನು ಮಟಕೆರೆಯ ರಾಮನಾಥದೇವರಿಗೆ ಮಲ್ಲಿಗನಹಳ್ಳಿಯ ಕಲ್ಲುಗಾಣ ಮತ್ತು ಮಠಕೆರೆಯ ಮಗ್ಗಸುಂಕ, ಮೂಟೆಸುಂಕ, ಒಳವಾರು ತೆರಿಗೆಯನ್ನು ಸರ್ವಮಾನ್ಯವಾಗಿ ದಾನ ಬಿಟ್ಟಿರುವುದು ಕಂಡುಬರುತ್ತದೆ.[20] ಹೆಗ್ಗಡದೇವನಕೋಟೆ 44ರ ಒಂದನೇ ಕುಲೋತ್ತುಂಗ ಚೋಳನ ಶಾಸನ ಈ ಗ್ರಾಮದಲ್ಲಿ ಕಂಡುಬರುತ್ತದೆ.[21] ಈ ದೇವಾಲಯವು ಚೋಳರ ಕಾಲದಲ್ಲಿ ನಿರ್ಮಿಸಲಾಗಿದ್ದು ಗರ್ಭಗೃಹ, ಸುಖನಾಸಿ, ನವರಂಗ ಭಾಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಎರಡು ಎತ್ತರದ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಸುಖನಾಸಿಯ ಮಧ್ಯಭಾಗದಲ್ಲಿ

ಒಂದು ಅಡಿ ಪಾಣಿ ಪೀಠದ ಮೇಲೆ ಸು 1.5 ಅಡಿ ಎತ್ತರದ ನಂದಿ ಶಿಲ್ಪವನ್ನು ಶಿವಲಿಂಗಕ್ಕೆ ಎದುರಾಗಿ ಪ್ರತಿಷ್ಠಾಪನೆ ಮಾಡಲಾಗಿದೆ. ನವರಂಗದಲ್ಲಿ ಗಣಪತಿ, ಭೈರವೇಶ್ವರ ದೇವರನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪವನ್ನು ವಿಜಯನಗರದ ಕಾಲದಲ್ಲಿ ಸೇರ್ಪಡೆಗೊಳಿಸಲಾಗಿದೆ. ರಾಮೇಶ್ವರ ದೇವಾಲಯದ ಎಡಭಾಗದಲ್ಲಿ ಪಾರ್ವತಿ ಗುಡಿ ಇರುವುದನ್ನು ಕಾಣಬಹುದು.[22]

**ಮೈಸೂರಿನ ಚಾಮುಂಡಿಬೆಟ್ಟದ ಮೇಲಿರುವ ಮಹಾಬಲೇಶ್ವರ ದೇವಾಲಯ**

ಚಾಮುಂಡಿಬೆಟ್ಟದ ಮೇಲಿರುವ ಈ ದೇವಾಲಯವು ಚಾಮುಂದೇಶ್ವರಿ ದೇವಾಲಯದ ದಕ್ಷಿಣಕ್ಕಿದೆ. ಚಾಮುಂಡಿಬೆಟ್ಟದ ಮೇಲಿರುವ ದೇವಾಲಯಗಳಲ್ಲಿಯೇ ಇದು ಪ್ರಾಚೀನವಾದುದಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಪ್ರವೇಶದ್ವಾರವು ಮಂಟಪಸಹಿತವಾದ ಪ್ರಾಕಾರ ಗೋಡೆಯನ್ನು ಹೊಂದಿದೆ. ಚಾಮುಂಡಿಬೆಟ್ಟವನ್ನು ಮಹಾಬಲಾದ್ರಿ, ಮಹಾಬಲಚಲವೆಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತೆಂಬ ವಿಷಯವು ಸಾ.ಶ.17ನೆಯ ಶತಮಾನದ ಹಸ್ತಪ್ರಿತಗಳಲ್ಲಿ ದಾಖಲಾಗಿದೆ. ಈ ದೇವಾಲಯವು ಗಂಗರ ಕಾಲಕ್ಕೆ ಸೇರಿದ್ದೆಂದೂ, ಪ್ರಾಚೀನ ಹಿನ್ನೆಲೆಯನ್ನು ಹೊಂದಿರುವ ಇದರ ಕಾಲ ಸಾ.ಶ.ಸುಮಾರು 950 ಎಂದು ಹಯವದನರಾವ್ ಅವರು ಗುರುತಿಸಿದ್ದಾರೆ. ಈ ದೇವಾಲಯದಲ್ಲಿ ಹೊಯ್ಸಳ ವಿಷ್ಣುವರ್ಧನನ ಶಾಸನ ಮತ್ತು ಸಾ.ಶ.1211ರ ಇಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲದ ಶಾಸನಗಳಿದ್ದು ಇದರಲ್ಲಿ ಮರ್ಬಲೇಶ್ವರ ದೇವರಿಗೆ ಕುಂಠಿಯ ಮಲ್ಲಿಕಾರ್ಜುನ, ಸಿದಘಟ್ಟದ ಕಲಿದೇವ ಮತ್ತು ಕುದೇರಿನ ಮಲ್ಲಿಕಾರ್ಜುನ ಮುಂತಾದವರು ಕೆಲಕೊಡೆಗಗಳನ್ನು ನೀಡಿದ ವಿಷಯವು ಉಲ್ಲೇಖಿತವಾಗಿದೆ.[23] ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಸುಮಾರು 45 ಅಡಿ ಉದ್ದದ ಮುಚ್ಚಿದ ಮಂಟಪವನ್ನು ಹೊಂದಿರುವ ಈ ದೇವಾಲಯದ ಗರ್ಭಾಂಕುರದ ಗೋಡೆಯು 8 ಅಡಿ ಎತ್ತರವಿದ್ದು ಇದನ್ನು ಒರಟಾದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಗರ್ಭಗೃಹದ ಮೇಲೆ 10 ಅಡಿ ಎತ್ತರದ ಗೋಪುರವಿದ್ದು ಇದನ್ನು ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾಗಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟ ಬಿಂಬದಲ್ಲಿ ವೃಷಭ ವಾಹನಧಾರಿಯಾದ ಶಿವನ ಉಬ್ಬು ಶಿಲ್ಪವಿದೆ.

**ಹಳೇಬೋಗಾದಿಯ ಭೋಗೇಶ್ವರ ದೇವಾಲಯ**

ಈ ದೇವಾಲಯವು ಮೈಸೂರಿನ ಹಳೇಬೋಗಾದಿ ಗ್ರಾಮದಲ್ಲಿದೆ. ಈ ದೇಗುಲದ ದಕ್ಷಿಣದ ಜಗತಿ ಕಟ್ಟೆಯ ಮೇಲೆ ಚೋಳ ಗಂಗದೇವನ 13ನೆಯ ವರ್ಷದ ಆಳ್ವಿಕೆಯ ಶಾಸನವಿದೆ.[24] ಇಲ್ಲಿರುವ ಸಪ್ತಮಾತೃಕೆ ದೇವಾಲಯವು ಪೂರ್ವಾಭಿಮುಖವಾಗಿದ್ದು, ಈ ದೇವಾಲಯದಲ್ಲಿ ಮುಖಮಂಟಪವಿರುವುದಿಲ್ಲ. ಆದರೆ ನವರಂಗವಿದ್ದು, ಇದು ಚೋಳರ ಕಾಲಕ್ಕೆ ಸೇರಿದ್ದಾಗಿದೆ. ಈ ನವರಂಗದಲ್ಲಿ ಸೊಗಸಾಗಿ ಕೆತ್ತಲಾಗಿರುವ ನಾಲ್ಕು ಕಂಬಗಳಿವೆ. ಕಂಠ ಮತ್ತು ಮುಚ್ಚಳವಿದ್ದು ಸರಳವಾದ ಬೋದಿಗೆ ಕಂಡುಬರುತ್ತದೆ. ಗರ್ಭಗುಡಿಯಲ್ಲಿ ಕಪ್ಪು ಹೊಳಪು ಕಲ್ಲಿನಿಂದ ನಿರ್ಮಿಸಲ್ಪಟ್ಟ ಎರಡು ಅಡಿ ಎತ್ತರದ ಅಂಡಾಕಾರದ ಲಿಂಗವಿದೆ. ಇದನ್ನು ಚೌಕಾಕಾರದ ಪಾಣಿಪೀಠದ ಮೇಲೆ ಕಂಡರಿಸಲಾಗಿದೆ. ಅಂತರಾಳದಲ್ಲಿ ಗಂಗರ ಕಾಲದ್ದೆಂದು ಹೇಳಲಾಗಿರುವ ಪಶ್ಚಿಮಾಭಿಮುಖವಾಗಿ ಎರಡು ಅಡಿ ಎತ್ತರದ ನಂದಿ ವಿಗ್ರಹಗಳಿವೆ.[25] ಹೀಗೆ ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಶಾಸನೋಕ್ತ ಶೈವ ದೇವಾಲಯಗಳನ್ನು ಅಧ್ಯಯನ ಮಾಡಲಾಗಿದೆ.

**ಕೊನೆಟಿಪ್ಪಣಿಗಳು**

1. ರಾಮಚಂದ್ರರಾವ್ ಎಸ್.ಕೆ, ಗುಡಿ ಜನರ ಜೀವನಾಡಿ, 1994.
2. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 1979.
3. ರಾಮಯ್ಯಂಗರ್ ಎಸ್.ಕೆ, ಕೆಲವು ಧಾರ್ಮಿಕ ಕರ್ತವ್ಯಗಳು, 1999.
4. ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್
5. ಎಕ–4, ಪಿರಿಯಾಪಟ್ಟಣ –37
6. ಎಕ–4, ಪಿರಿಯಾಪಟ್ಟಣ –22
7. ಎಕ–4, ಪಿರಿಯಾಪಟ್ಟಣ –103
8. ಎಕ–4, ಪಿರಿಯಾಪಟ್ಟಣ –110
9. ಎಕ–4, ಪಿರಿಯಾಪಟ್ಟಣ –71
10. ಎಕ–4, ಪಿರಿಯಾಪಟ್ಟಣ –01
11. ಎ.ಕ.ಸಂ.5, ತಿರುಮಕೂಡಲು ನರಸೀಪುರ ., ಶಾ.ಸಂ.96, ಪು.ಸಂ.481
12. ಡಿ.ವಿ.ದೇವರಾಜು– ಹಿಸ್ಟರಿ ಆಫ್ ಸೋಮನಾಥಪುರ, 1994, ಪು.ಸಂ.12
13. ಶ್ರೀಕಂಠಶಾಸ್ತ್ರೀ–ಹೊಯ್ಸಳ ವಾಸ್ತುಶಿಲ್ಪ, ಪು.ಸಂ.59
14. ಎ.ಕ.ಸಂ.5, ತಿರುಮಕೂಡಲು ನರಸೀಪುರ ., ಶಾ.ಸಂ.96, ಪು.ಸಂ.481
15. ಕ್ಷೇತ್ರಕಾರ್ಯ ವರದಿ ಆಧರಿಸಿ ಬರೆಯಲಾಗಿದೆ.
16. ಎಂ.ಎ.ಆರ್., 1942, ಪು.ಸಂ.59
17. ಎಕ–3, ಹೆಗ್ಗಡದೇವನಕೋಟೆ 45
18. ಅದೇ, ಹೆಗ್ಗಡದೇವನಕೋಟೆ 33
19. ಅದೇ, ಹೆಗ್ಗಡದೇವನಕೋಟೆ 134
20. ಅದೇ, ಹೆಗ್ಗಡದೇವನಕೋಟೆ 43
21. ಅದೇ, ಹೆಗ್ಗಡದೇವನಕೋಟೆ 44
22. ಕ್ಷೇತ್ರಕಾರ್ಯ ವರದಿ
23. ಎಕ–5, ಮೈಸೂರು–139, ಪು.277
24. ಎಕ–5, ಮೈಸೂರು–221, ಪು.320
25. ಕ್ಷೇತ್ರಕಾರ್ಯ ವರದಿ